Sri F. H. MOHSIN.—According to the rules, are there any provisions for the constitution of such District and Divisional Committees in the new rules that have been framed?

ಶ್ರೀ ವಿ. ವೆಂಕಟಪ್ಪ.—ಯೂನಿಫಾರ್ಮ್ ರೂಲ್ಸ್ ಆದಮೇಲೆ ಮಾಡಬಹುದು.

ಶ್ರೀ ಜಿ. ಎನ್. ಪುಟ್ಟಣ್ಣ.—ಹರಿಜನರು ಮಾತ್ರ ಇರಬೇಕು, ಬೇರೆಯವರು ಇರಕೂಡದು ಎಂದು ಇದ್ದರೆ ಡಿಪ್ರೆಸ್ಡ್‌ಕ್ಲಾಸಿನಲ್ಲಿ ಯಾರುಯಾರನ್ನು ಸೇರಿಸಿದ್ದಾರೆ?

ಶ್ರೀ ವಿ. ವೆಂಕಟಪ್ಪ.—ಡಿಪ್ರೆಸ್ಡ್ ಕ್ಲಾಸಿನಲ್ಲಿ ಎಲ್ಲರೂ ಇದ್ದಾರೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಡಿಪ್ರೆಸ್ಡ್‌ಕ್ಲಾಸ್ ಮತ್ತು ಷೆಡ್ಯೂಲ್ಡ್‌ಕಾಸ್ಟ್ ಎಂದು ಇದೆ. ಆದರೆ ಹರಿಜನರನ್ನು ಮಾತ್ರ ಸೇರಿಸುತ್ತೇವೆ ಎಂದು ಈಗ ತಾನೆ ಉತ್ತರ ಹೇಳಿದಿರಿ. ಹಾಗಾದರೆ ಬೇರೆಯವರು ಇಲ್ಲ ಎಂದರೆ ಅವರು ಯಾರು?

ಶ್ರೀ ವಿ. ವೆಂಕಟಪ್ಪ.—ಬೇರೆ ಅಂದರೆ ನವರ್ಣೀಯರು ಇಲ್ಲವೆಂದು ಹೇಳಿದೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಹರಿಜನರನ್ನು ಮಾತ್ರ ಸೇರಿಸುತ್ತೇವೆ ಬೇರೆಯವರು ಇಲ್ಲ ಎಂದರೆ ಡಿಪ್ರೆಸ್ಡ್ ಕ್ಲಾಸ್ ವತ್ತು ಷೆಡ್ಯೂಲ್ಡ್‌ಕಾಸ್ಟ್ ಇವರನ್ನು ಸೇರಿಸುವುದಿಲ್ಲವೇ?

ಶ್ರೀ ವಿ. ವೆಂಕಟಪ್ಪ.—ಹರಿಜನರು ಅಂದರೆ ಎಲ್ಲರೂ ಡಿಪ್ರೆಸ್ಡ್ ಕ್ಲಾಸ್‌ನವರೇ. ಹರಿಜನರು ಬೇರೆ, ಡಿಪ್ರೆಸ್ಡ್‌ಕ್ಲಾಸ್ ಬೇರೆ ಎಂದು ಅಲ್ಲ. ಎಲ್ಲರಿಗೂ ಅನ್ವಯಿಸುತ್ತದೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಹಾಗಾದರೆ ಅವರನ್ನು ಸೇರಿಸುತ್ತಿರಾ?

ಶ್ರೀ ವಿ. ವೆಂಕಟಪ್ಪ.—ಸೇರಿಸಿರುತ್ತೇವೆ.

ಶ್ರೀ ಎಸ್. ನುಬ್ಬಯ್ಯನಾಯಕ್.—ನಮಿತಿಯ ರಚನೆಯಾಗಿ ಎಷ್ಟು ದಿವಸವಾಯಿತು?

ಶ್ರೀ ವಿ. ವೆಂಕಟಪ್ಪ.—ಒಂದು ವರ್ಷವಾಯಿತು.

Sri N. RACHIAH.—Are the Government aware that some of these committees have passed anunanimous resolution that all the persons belonging to scheduled castes and scheduled tribes in High and Middle Schools should be given scholarships? If so what is the action taken by Government?

ಶ್ರೀ ವಿ. ವೆಂಕಟಪ್ಪ.—ಇಲ್ಲ. ಈವರೆಗೆ ಅಂಥ ರೆಜಲ್ಯೂಷನ್ ನನಗೆ ಬಂದಿಲ್ಲ.

ಶ್ರೀ ಎಸ್. ನುಬ್ಬಯ್ಯನಾಯಕ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವಿಚಾರವಾಗಿ ವಿದ್ಯಾರ್ಥಿಗಳಿಗೆ ಬಹಳ ಕಷ್ಟವಾಗುತ್ತಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ವಿ. ವೆಂಕಟಪ್ಪ.—ಈ ಮೊದಲು ಯಾವ ಪದ್ಧತಿಯು ಇದ್ದಿತೋ ಅದೇ ಪದ್ಧತಿಯನ್ನು ಈಗಲೂ ಅನುಸರಿಸುತ್ತಿರುವದರಿಂದ ಕಷ್ಟ ಬರುವುದಕ್ಕೆ ಕಾರಣ ಏನೂ ಇಲ್ಲ. ಹಿಂದೆ ಇದ್ದ ಪದ್ಧತಿಯೇ ಈಗಲೂ ಇದೆ.

ಶ್ರೀ ಎಸ್. ನುಬ್ಬಯ್ಯನಾಯಕ್.—ಹಳೆಯ ಪದ್ಧತಿಯಿಂದಲೇ ವಿದ್ಯಾರ್ಥಿಗಳಿಗೆ ಕಷ್ಟವಾಗುತ್ತಿದೆ. ಈ ಕಮಿಟಿಯವರು ಹಂಚತಕ್ಕ ಹಣ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ದೊರೆಯುತ್ತಿಲ್ಲ. ಈಗ ಈ ಕಮಿಟಿಯ ರಚನೆಮಾಡಲಾಗಿದೆ. ಆದುದರಿಂದ ಈ ಕಮಿಟಿಯ ಮುಖಾಂತರ ಸಕಾಲದಲ್ಲಿ ಹಣ ದೊರೆಯುವ ಹಾಗೆ ಸರಕಾರದವರು ಏನಾದರೂ ಕ್ರಮ ತೆಗೆದುಕೊಳ್ಳುವರೋ?

ಶ್ರೀ ವಿ. ವೆಂಕಟಪ್ಪ.—ಕ್ರಮ ತೆಗೆದು ಕೊಳ್ಳುತ್ತಿದ್ದೇವೆ.

Sri M. MALLIKARJUNASWAMY.—Are there any T.A. and D.A. fixed for the members of these committees?

ಶ್ರೀ ವಿ. ವೆಂಕಟಪ್ಪ.—ಇಲ್ಲ.

Mr. SPEAKER.—Question time is over.

QUESTIONS FOR ANSWERS ON THE DAY

(but not taken up)

Permanent Grant of Lands to Scheduled Castes in the State.

Q.—834. Sri B. BASAVALINGAPPA (Bangalore South).—

Will the Government be pleased to state :—

(*a*) the total extent of land granted permanently to the Scheduled Castes in Mysore State for the last three years;

(*b*) the extent of dry and wet land so granted;

(*c*) the total extent of land granted for temporary cultivation since three years;

(*d*) the total extent of land confirmed?

A.—Sri R. CHENNIGARAMAIAH (Minister for Local Self-Government).—

		Acres	*Guntas*
(*a*)		97,749	21
(*b*)		*Acres*	*Guntas*
Dry land	...	89,248	39
Wet land	...	8,500	22
(*c*)		*Acres*	*Guntas*
		17,861	33
(*d*)		44,631	13